# ಆಲೂರಿನ ಸಿವಿಲ್ ಜಡ್ಜ್ ಹಾಗೂ ಜೆ ಎಂ ಎಫ್ ಸಿ ರವರ ನ್ಯಾಯಾಲಯ

**ಸಿಸಿ ನಂಃ 444/2014**

ಪಿರ್ಯಾದಿಃ- ಸರ್ಕಾರದ ಪರವಾಗಿ ಆಲೂರು ಪೋಲೀಸ್ ಠಾಣೆ

ವಿರುದ್ಧ

ಆರೋಪಿತರುಃ-

1. ಸವಿತ, ಗಂಡಃ ಸುಧರ್ಶನ್,
ಪ್ರಾಯಃ 40 ವರ್ಷ,

2. ಮಧನ್, ತಂದೆಃ ಸುಧರ್ಶನ್,
ಪ್ರಾಯಃ 22 ವರ್ಷ,

ಇಬ್ಬರೂ ವಾಸಃ ಬಸವನಹಳ್ಳಿ ಗ್ರಾಮ,
ಪಾಳ್ಯ ಹೋಬಳಿ, ಆಲೂರು ತಾಲೋಕು.

3. ಮೇಘನ ಯಾನೆ ಮೇಘ,
ತಂದೆಃ ಸುದರ್ಶನ್,
ಪ್ರಾಯಃ 20 ವರ್ಷ,
2ನೇ ಬಿ.ಎಸ್.ಸಿ, ವಿದ್ಯಾರ್ಥಿ,
ಬವಸವಳ್ಳಿ ಗ್ರಾಮ, ಪಾಳ್ಯ ಹೋಬಳಿ,
ಆಲೂರು ತಾಲೋಕು.

## ದೋಷಾರೋಪಣೆ

ಆಶಾ ಕೆ.ಎಸ್, ಬಿ.ಎ.ಎಲ್.ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು ಆಲೂರು, ಆದ ನಾನು ನಿಮ್ಮ ವಿರುದ್ದ ಈ ಕೆಳಕಂಡಂತೆ ದೋಷರೊಪಣಿ ಮಾಡುತ್ತಿದ್ದೇನೆ.

ದಿನಾಂಕಃ15-10-2013ರಂದು ಮಧ್ಯಾಹ್ನ 1.30 ಗಂಟೆಯಲ್ಲಿ ಆಲೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಬಾವಸವಳ್ಳಿ ಗ್ರಾಮದಲ್ಲಿ ಚಾಸಾ-1 ಧರ್ಮಪ್ಪ

ಬಿ.ಪಿ.ರವರ ಪತ್ನಿ ಶ್ರೀಮತಿ ಮೋಹನಾಕ್ಷಿರವರು ಬಟ್ಟೆಯನ್ನು ಒಣಗಿಸಲು ಬಿಸಿಲಿಗೆ ಹಾಕಿ ತಮ್ಮ ಮನೆಗೆ ಹೋಗಲೆಂದು ತಮ್ಮ ಮನೆಯ ಮುಂಭಾಗ ನಡೆದುಕೊಂಡು ಹೋಗುತ್ತಿರುವಾಗ 1 ರಿಂದ 3ನೇ ಆರೋಪಿತರು ಸಮಾನ ಉದ್ದೇಶಿದಿಂದ ಮನೆ ಮತ್ತು ನಿವೇಶನದ ವಿಚಾರದಲ್ಲಿ ದ್ವೇಷವಿಟ್ಟುಕೊಂಡು ಮೃತ ಶ್ರೀಮತಿ ಮೋಹನಾಕ್ಷಿರವರನ್ನು ಅಕ್ರಮವಾಗಿ ತಡೆದಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 341 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಅರೋಪ ಮಾಡಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಮೃತ ಶ್ರೀಮತಿ ಮೋಹನಾಕ್ಷಿರವರಿಗೆ ಸೂಳೆ ಮುಂಡೆ, ಹಲ್ಕಮುಂಡೆ ಇತ್ಯಾದಿಯಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪ ಮಾಡಲಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ 1ನೇ ಆರೋಪಿಯಾದ ನೀವು ಕೈಯಿಂದ ಮೃತೆ ಶ್ರೀಮತಿ ಮೋಹನಾಕ್ಷಿರವರ ಮೈ, ಕೈಗೆ ಹೊಡೆದು, 3ನೇ ಆರೋಪಿಯಾದ ನೀವು ಮೃತೆ ಶ್ರೀಮತಿ ಮೋಹನಾಕ್ಷಿರವರ ತಲೆಯ ಜುಟ್ಟನ್ನು ಹಿಡಿದು ಎಳೆದಾಡಿ ಕೈಗಳಿಂದ ಮೈ, ಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಅರೋಪ ಮಾಡಲಾಗಿದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ಸಮಾನ ಉದ್ದೇಶದಿಂದ ನಿಮ್ಮ ಪೈಕಿ 2ನೇ ಆರೋಪಿಯಾದ ನೀವು ಮಾರಕಾಯುಧವಾದ ದೊಣ್ಣೆಯಿಂದ ಮೃತೆ ಶ್ರೀಮತಿ ಮಾಹನಾಕ್ಷಿರವರ ಎಡ ಮೊಣಕೈಗೆ, ಎಡಭಾಗದ ಪಕ್ಕೆಗೆ, ಬೆನ್ನಿಗೆ, ಎದೆಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶಿದಿಂದ ಚಾಸಾ-1 ಮತ್ತು ಮೃತೆ ಮೋಹನಾಕ್ಷಿರವರಿಗೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 506 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆಃ1ಃ ಈಗ ಓದಿ ಹೇಳಿದ ವಿಷಯವು ನಿಮಗೆ ಅರ್ಥವಾಯಿತೆ?

ಉತ್ತರಃ- ಆ.1

ಆ.2

ಆ.3

ಪ್ರಶ್ನೆಃ2ಃ ತಪ್ಪಾಯಿತೆನ್ನುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ- ಆ.1

ಆ.2

ಆ.3

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರಿಂದ ಬಂದ ಉತ್ತರವನ್ನು ಸರಿಯಾಗಿ ಬರೆದಿದ್ದೇನೆಂದು ಧೃಡೀಕರಿಸಿರುತ್ತೇನೆ.)

ಸ್ಥಳಃ ಆಲೂರು
ದಿನಾಂಕಃ 4-8-2016.

ಸಿವಿಲ್ ಜಡ್ಜ್ ಹಾಗೂ ಜೆಎಂಎಫ್‌ಸಿ,
ಆಲೂರು.